3

# ಬಾಪ್ತಿಸ್ಮದಲ್ಲಿ ತಿಳುವಳಿಕೆ, ನಂಬಿಕೆ ಮತ್ತು ನಿರ್ಧಾರ

*"ಸುನ್ನತಿ ಮಾಡಿಸಿಕೊಳ್ಳುವ ತಾವಾದರೂ ಧರ್ಮಶಾಸ್ತ್ರವನ್ನು ಕೈಕೊಂಡು ನಡೆಯುವದಿಲ್ಲ. ಅವರು ನಿಮ್ಮ ಶರೀರದ ವಿಷಯದಲ್ಲಿ ಹೆಚ್ಚಳ ಪಡುವದಕ್ಕಾಗಿ ನಿಮಗೆ ಸುನ್ನತಿಯಾಗಬೇಕೆಂದು ಅಪೇಕ್ಷಿಸುತ್ತಾರೆ. ನನಗಾದರೋ ನಮ್ಮ ಕರ್ತನಾದ ಯೇಸು ಕ್ರಿಸ್ತನ ಶಿಲುಬೆಯ ವಿಷಯದಲ್ಲಿ ಹೊರತು ಹೆಚ್ಚಳ ಪಡುವದು ಬೇಡವೇ ಬೇಡ ಆತನ ಮೂಲಕ ಲೋಕವು ಶಿಲುಬೆಗೆ ಹಾಕಿಸಿಕೊಂಡು ನನ್ನ ಪಾಲಿಗೆ ಸತ್ತಿತು - ನಾನು ಶಿಲುಬೆಗೆ ಹಾಕಿಸಿಕೊಂಡು ಲೋಕದ ಪಾಲಿಗೆ ಸತ್ತೆನು. ಸುನ್ನತಿಯಾಗುವದರಲ್ಲಿ ಏನೂ ಇಲ್ಲ, ಸುನ್ನತಿಯಾಗದೆ ಇರುವದರಲ್ಲಿಯೂ ಏನೂ ಇಲ್ಲ; ಹೊಸ ಸೃಷ್ಟಿಯೇ ಬೇಕು" (ಗಲಾತ್ಯ 6:13-15).*

ದೈಹಿಕ ಕೃತ್ಯಗಳು ದೇವರಿಗೆ ಮಹತ್ವದವುಗಳಾಗಿವೆ. ಧರ್ಮಶಾಸ್ತ್ರದ ಅಧೀನತೆಯಲ್ಲಿ, ಸುನ್ನತಿಯಿಲ್ಲದ ಮನುಷ್ಯನು ತನ್ನ ಜನರಿಂದ ಹೊರಗೆ ಹಾಕಲ್ಪಟ್ಟ ಸಂಗತಿಯಲ್ಲಿ ಇದು ಕಂಡುಬರುತ್ತದೆ (ಆದಿಕಾಂಡ 17:14). ಹಾಗಿದ್ದರೂ, ಜೀವನದ ಸರಿಯಾದ ರೀತಿಯನ್ನು ಒಳಗೊಂಡಿರದೇ ಇದ್ದ ಸುನ್ನತಿಯು ಸುನ್ನತಿಯಲ್ಲವೆಂದು ತಿಳಿಯಲ್ಪಡಬೇಕಾಗಿತ್ತು (ರೋಮಾಪುರ 2:25). ಹಾಗೆಯೇ, ಬಾಪ್ತಿಸ್ಮದೊಂದಿಗೆ ಸಂಬಂಧಿಸಿದ ಆತ್ಮಿಕ ತತ್ವಗಳಿಗೆ ಹೃದಯ ಪೂರ್ವಕವಾಗಿ ನಾವು *ವಿಧೇಯ*ರಾದರೆ ಮಾತ್ರ ಬಾಪ್ತಿಸ್ಮಕ್ಕೆ ಬೆಲೆಯಿರುತ್ತದೆ. ನಮ್ಮ ಪರವಾಗಿ ದೈಹಿಕ ಕೃತ್ಯವನ್ನು ಒಳಗೊಂಡಿರುವದಲ್ಲದೇ, ನಮ್ಮ ಹೃದಯಗಳ ಜೊತೆಗಾರಿಕೆಯನ್ನೂ ಒಳಗೊಂಡಿರುವುದು.

ದೇವರು ಯಾವುದೇ ವಿಷಯದಲ್ಲಿ ತನ್ನೊಂದಿಗಿನ ನಮ್ಮ ಸಂಬಂಧದಲ್ಲಿ ಬರಿದಾದ ದೈಹಿಕ ಕೃತ್ಯಗಳನ್ನು ಬಯಸಿರುವದಿಲ್ಲ: ಕೃತ್ಯಗಳೊಂದಿಗೆ ಹೃದಯದ ಕಡೆಗೂ ಆತನು ನೋಡುತ್ತಾನೆ. ಎಲಿಯಾಬನ ನೋಟವನ್ನೂ ಎತ್ತರವನ್ನೂ ಅವಲಂಬಿಸಿ, ಇಸ್ರಾಯೇಲಿನ ಅರಸನಾಗಲು ಎಲಿಯಾಬನನ್ನು ದೇವರು ಆಯ್ದುಕೊಳ್ಳುತ್ತಿರುವನು ಎಂದು ಸಮುವೇಲನು ತಪ್ಪಾಗಿ ನಿರ್ಧರಿಸಿದನು. "ನೀನು ಅವನ ಚೆಲುವಿಕೆಯನ್ನೂ ನೀಳವನ್ನೂ ನೋಡಬೇಡ; ನಾನು ಅವನನ್ನು ತಳ್ಳಿಬಿಟ್ಟಿದ್ದೇನೆ. ಯೆಹೋವನು ಮನುಷ್ಯರಂತೆ ಹೊರಗಿನ ತೋರಿಕೆಯನ್ನು ನೋಡದೆ, ಹೃದಯವನ್ನೇ ನೋಡುವವನಾಗಿದ್ದಾನೆ" ಎಂದು ದೇವರು ಅವನಿಗೆ ಹೇಳಿದನು (1 ಸಮುವೇಲ 16:7).

ಕ್ರಿಸ್ತನೊಂದಿಗೆ ಶಿಲುಬೆಗೆ ಹಾಕಿಸಿಕೊಂಡ ಜೀವಿತವನ್ನು - ನೂತನ ಜೀವವನ್ನು ದೇವರು ಅಪೇಕ್ಷಿಸುತ್ತಾನೆ (ಗಲಾತ್ಯ 6:14, 15). ನಾವು ಬಾಪ್ತಿಸ್ಮ ಮಾಡಿಸಿಕೊಳ್ಳುವಾಗ ನಾವು ನೂತನ ಜೀವಿತದಲ್ಲಿ ಪ್ರವೇಶಿಸದಿದ್ದರೆ, ನಮ್ಮ ಬಾಪ್ತಿಸ್ಮವು ಬೆಲೆಯಿಲ್ಲದ್ದಾಗುತ್ತದೆ; ಯಾಕಂದರೆ ನೂತನ ಜೀವಿತವು ಬಾಪ್ತಿಸ್ಮದ ಮುಖಾಂತರ ನಾವು ಅನುಭವಿಸುವ ಮರಣ, ಹೂಣಿಡುವಿಕೆ, ಮತ್ತು ಪುನರುತ್ಥಾನವನ್ನು ಅನುಸರಿಸುವುದಾಗಿದೆ

(ರೋಮಾಪುರ 6:4).

ಪೌಲನ ಜೀವಿತವು ಈ ಬದಲಾವಣೆಗೆ ಪರಿಪೂರ್ಣವಾದ ಒಂದು ಉದಾಹರಣೆಯಾಗಿದೆ. ಬಾಪ್ತಿಸ್ಮದಲ್ಲಿ ಅವನು ತನ್ನ ಹಳೇ ಸ್ವಭಾವವನ್ನು ಮರಣಕ್ಕೊಪ್ಪಿಸಿ ಯೇಸುವಿಗಾಗಿ ನೂತನ ಜೀವಿತ ಪ್ರಾರಂಭಿಸಿದನು. ರೋಮಾಪುರ 6:4-6 ನಮಗೆ ಹೀಗೆ ಹೇಳುತ್ತದೆ,

> ಹೀಗಿರಲಾಗಿ ನಾವು ಬಾಪ್ತಿಸ್ಮ ಮಾಡಿಸಿಕೊಂಡಾಗ ಆತನ ಮರಣದಲ್ಲಿ ಪಾಲುಗಾರರಾಗಿ ಆತನೊಂದಿಗೆ ಹೂಣಲ್ಪಟ್ಟೆವು. ಆದದರಿಂದ ಕ್ರಿಸ್ತನು ಸತ್ತು ತಂದೆಯ ಮಹಿಮೆಯಿಂದ ಜೀವಿತನಾಗಿ ಎಬ್ಬಿಸಲ್ಪಟ್ಟಂತೆಯೇ ನಾವು ಕೂಡ ಜೀವದಿಂದೆದ್ದು ಹೊಸಬರಾಗಿ ನಡಕೊಳ್ಳಬೇಕು. ಹೇಗಂದರೆ ನಾವು ಆತನ ಮರಣಕ್ಕೆ ಸದೃಶವಾದ ಮರಣವನ್ನು ಹೊಂದಿ ಆತನಲ್ಲಿ ಐಕ್ಯವಾಗಿದ್ದರೆ ಆತನ ಪುನರುತ್ಥಾನಕ್ಕೆ ಸದೃಶವಾದ ಪುನರುತ್ಥಾನವನ್ನೂ ಹೊಂದಿ ಆತನಲ್ಲಿ ಐಕ್ಯವಾಗುವೆವು. ಪಾಪಾಧೀನಸ್ವಭಾವವು ನಾಶವಾಗಿ ನಾವು ಇನ್ನೂ ಪಾಪದ ವಶದಲ್ಲಿರದಂತೆ ನಮ್ಮ ಪೂರ್ವಸ್ವಭಾವವು ಕ್ರಿಸ್ತನ ಕೂಡ ಶಿಲುಬೆಗೆ ಹಾಕಲ್ಪಟ್ಟಿತೆಂದು ತಿಳಿದಿದ್ದೇವೆ.

ಪೌಲನು ಅದನ್ನು ಈ ರೀತಿಯಲ್ಲಿ ಹೇಳಿದ್ದಾನೆ: "ಕ್ರಿಸ್ತನೊಂದಿಗೆ ಶಿಲುಬೆಗೆ ಹಾಕಿಸಿಕೊಂಡವನಾಗಿದ್ದೇನೆ; ಇನ್ನು ಜೀವಿಸುವವನು ನಾನಲ್ಲ, ಕ್ರಿಸ್ತನು ನನ್ನಲ್ಲಿ ಜೀವಿಸುತ್ತಾನೆ; ಈಗ ಶರೀರದಲ್ಲಿರುವ ನಾನು ಜೀವಿಸುವದು ಹೇಗಂದರೆ ದೇವರ ಕುಮಾರನ ಮೇಲಣ ನಂಬಿಕೆಯಲ್ಲಿಯೇ. ಆತನು ನನ್ನನ್ನು ಪ್ರೀತಿಸಿ ನನಗೋಸ್ಕರ ತನ್ನನ್ನು ಒಪ್ಪಿಸಿಬಿಟ್ಟನು" (ಗಲಾತ್ಯ 2:20; ಒತ್ತಿ ಹೇಳಿದ್ದು ನನ್ನದು).

## ನಾವು ಏನನ್ನು ತಿಳಿಯ ತಕ್ಕದ್ದು

ಅಪೊಸ್ತಲರ ಕೃತ್ಯಗಳ ಗ್ರಂಥದಲ್ಲಿ ಕ್ರೈಸ್ತರಾದವರು ತಾವು ಬಾಪ್ತಿಸ್ಮ ಮಾಡಿಸಿಕೊಳ್ಳುವ ಅಗತ್ಯತೆಯಿದೆ ಎಂದು ತಿಳಿದುಕೊಂಡ ದಿನವೇ ಬಾಪ್ತಿಸ್ಮ ಹೊಂದಿಕೊಂಡದ್ದರಿಂದ, ನಾವು ತಿಳಿಯತಕ್ಕದ್ದೆಲ್ಲವೂ ದೇವರು ಬಾಪ್ತಿಸ್ಮವನ್ನು ಆಜ್ಞಾಪಿಸಿದ್ದಾನೆ ಎಂಬುದು ಎಂದು ಕೆಲವರು ನಿರ್ಣಯಿಸಿಕೊಂಡಿದ್ದಾರೆ. ಇದಕ್ಕಿಂತ ಹೆಚ್ಚಾದದ್ದು ಬೋಧಿಸಲ್ಪಟ್ಟಿತು, ಅಂದರೆ ಬಾಪ್ತಿಸ್ಮ ಹೊಂದಿದವರಿಗೆ, ಇದಕ್ಕಿಂತ ಹೆಚ್ಚಾದದ್ದು ಬೇಕಾಗಿತ್ತು ಎಂದರ್ಥವಾಗುತ್ತದೆ. ಯೇಸುವಿನ ಹಿಂಬಾಲಕರಾಗುವವರು ನಂಬುವಂತೆ ಮಾಡಲು ಈ ಕೆಳಗಿನ ಕೆಲವೊಂದು ಸತ್ಯಗಳು ಬೋಧಿಸಲ್ಪಟ್ಟವು:

1. *ಒಬ್ಬನೇ ನಿಜವಾದ ದೇವರು ಇರುವನು* (ಅಪೊಸ್ತಲರ ಕೃತ್ಯಗಳು 3:13; 14:15; 17:23-31). ಜನರನ್ನು ರಕ್ಷಣೆಗೆ ತರುವದಕ್ಕಾಗಿ ಅಬ್ರಹಾಮನ, ಇಸಾಕನ, ಮತ್ತು ಯಾಕೋಬನ ದೇವರು ಯೆಹೂದ್ಯರಿಗೆ ಪ್ರಸಂಗಿಸಲ್ಪಟ್ಟನು. ಅನಂತರದಲ್ಲಿ, ಅನ್ಯಜನರಿಗೆ ಪೌಲನು ಪರಲೋಕವನ್ನೂ ಭೂಲೋಕವನ್ನೂ ಸೃಷ್ಟಿಸಿದ ಜೀವಿಸುವ ದೇವರನ್ನು ಪ್ರಸಂಗಿಸಿದನು.

2. *ಯೇಸುವು ಕರ್ತನು ಮತ್ತು ಕ್ರಿಸ್ತನು, ದೇವರ ಕುಮಾರನು ಆಗಿರುತ್ತಾನೆ* (ನೋಡಿರಿ ಅಪೊಸ್ತಲರ ಕೃತ್ಯಗಳು 2:36; 4:10, 11; 5:42; 9:20, 22; 10:36; 17:3; 18:5, 28). ಆತ್ಮಿಕ ಜೀವಿತವು, ಯೇಸುವು ಕ್ರಿಸ್ತನೂ, ದೇವರ ಕುಮಾರನೂ ಆಗಿರುತ್ತಾನೆ ಎಂದು ನಂಬುವದರ ಮೇಲೆ ಅವಲಂಭಿಸಿರುತ್ತದೆ (ಯೋಹಾನ 20:30, 31).

3. *ಕರ್ತನ ವಾಕ್ಯವು ರಕ್ಷಿಸುತ್ತದೆ* (ಅಪೊಸ್ತಲರ ಕೃತ್ಯಗಳು 11:14; 16:32; 2 ತಿಮೊಥೆ 4:2ನ್ನೂ ನೋಡಿರಿ).

4. *ಯೇಸುವು ರಕ್ಷಕನಾಗಿರುತ್ತಾನೆ.* ಯೇಸುವಿನ ಮರಣ, ಹೂಣಿಡುವಿಕೆ, ಮತ್ತು ಪುನರುತ್ಥಾನವನ್ನೊಳಗೊಂಡು, ಸಂಪೂರ್ಣ ಸುವಾರ್ತೆಯು ಪ್ರಸಂಗಿಸಲ್ಪಟ್ಟಿತು (ನೋಡಿರಿ ಅಪೊಸ್ತಲರ ಕೃತ್ಯಗಳು 2:32; 8:5, 25, 35; 14:7, 21; 16:10; 1 ಕೊರಿಂಥ 2:1, 2; 15:1-4).

5. *ಯೇಸು ಇಲ್ಲದೇ ನಾವು ತಪ್ಪಿಹೋದವರಾಗುತ್ತೇವೆ ಮತ್ತು ಕ್ಷಮಾಪಣೆಯ ಅಗತ್ಯತೆಯಲ್ಲಿರುತ್ತೇವೆ* (ಅಪೊಸ್ತಲರ ಕೃತ್ಯಗಳು 4:10-12).

6. *ನಾವು ಮಾನಸಾಂತರ ಪಡುವ ಅಗತ್ಯತೆ ಇರುತ್ತದೆ, ಅಂದರೆ ನಮ್ಮ ಜೀವಿತಗಳನ್ನು ಬದಲಾಯಿಸುವುದು* (ಅಪೊಸ್ತಲರ ಕೃತ್ಯಗಳು 2:38; 3:19; 17:30).

7. *ನಾವು ಬಾಪ್ತಿಸ್ಮ ಹೊಂದಿದಾಗ ಪಾಪಗಳು ಕ್ಷಮಿಸಲ್ಪಡುತ್ತವೆ* (ಅಪೊಸ್ತಲರ ಕೃತ್ಯಗಳು 2:38; 22:16).

8. *ದೇವರ ರಾಜ್ಯವನ್ನು ಕುರಿತಾದ ಸತ್ಯವು* ಪ್ರಸಂಗಿಸಲ್ಪಟ್ಟಿತು (ಅಪೊಸ್ತಲರ ಕೃತ್ಯಗಳು 8:12; 19:8; 20:25; 28:23, 31).

ಐಥಿಯೋಪ್ಯದ ಕಂಚುಕಿಯು ಬಾಪ್ತಿಸ್ಮ ಹೊಂದುವದಕ್ಕಿಂತ ಮೊದಲು ಏನನ್ನು ತಿಳಿದಿದ್ದನು? (ನೋಡಿರಿ ಅಪೊಸ್ತಲರ ಕೃತ್ಯಗಳು 8:26-39.) ಯೆಶಾಯ 53ರಲ್ಲಿಯ ಒಂದು ವಾಕ್ಯಭಾಗದಿಂದ ಫಿಲಿಪ್ಪನು ಅವನಿಗೆ ಕ್ರಿಸ್ತನನ್ನು ಪ್ರಸಂಗಿಸಿದನು. ಈ ಪ್ರವಾದನೆಯಿಂದ, ಅವನು ಯೇಸುವನ್ನು ಕುರಿತು ಬೋಧಿಸುವವನಾದನು: "ನಮ್ಮ ಅಪರಾಧಗಳ ನಿಮಿತ್ತ ಅವನು ಜಜ್ಜಲ್ಪಟ್ಟನು" (ವಚನ 5); "ನಮ್ಮೆಲ್ಲರ ದೋಷಫಲವನ್ನು **ಕರ್ತನು** ಅವನ ಮೇಲೆ ಹಾಕಿದನು" (ವಚನ 6); "ಇವನು ತನ್ನ ಆತ್ಮವನ್ನು ಪ್ರಾಯಶ್ಚಿತ್ತ ಯಜ್ಞವಾಗಿ ಅರ್ಪಿಸುವನು" (ವಚನ 10); "... ನನ್ನ ಸೇವಕನು ... ಬಹು ಜನರನ್ನು, ಧರ್ಮಮಾರ್ಗಕ್ಕೆ ತರುವನು; ಅವರ ಅಪರಾಧಗಳನ್ನು ಹೊತ್ತುಕೊಂಡು ಹೋಗುವನು" (ವಚನ 11); "... ಬಹು ಜನ ದ್ರೋಹಿಗಳ ಪಾಪವನ್ನು ಹೊತ್ತುಕೊಂಡನು" (ವಚನ 12).

ಫಿಲಿಪ್ಪನು "ದೇವರ ರಾಜ್ಯದ ವಿಷಯದಲ್ಲಿಯೂ ಯೇಸುಕ್ರಿಸ್ತನ ಹೆಸರಿನ ವಿಷಯದಲ್ಲಿಯೂ" (ಅಪೊಸ್ತಲರ ಕೃತ್ಯಗಳು 8:12) ಸಮಾರ್ಯದವರಿಗೆ ಪ್ರಸಂಗಿಸಿದ್ದನ್ನು ಅವನಿಗೆ ಪ್ರಸಂಗಿಸಿದ್ದಿರಬೇಕು. "ಅವನಿಗೆ ಯೇಸುವನ್ನು ಪ್ರಸಂಗಿಸಿದನು" (ಅಪೊಸ್ತಲರ ಕೃತ್ಯಗಳು 8:35) ಎಂದು ಸಂಕ್ಷೇಪವಾಗಿ ಹೇಳಬಹುದು.

ಅದರ ಪರಿಣಾಮವು, ಐತಿಯೋಪ್ಯದ ಕಂಚುಕಿಯು ಬಾಪ್ತಿಸ್ಮ ಹೊಂದಲು ಬಯಸಿದನು. ಯೇಸುವು ತನ್ನ ಪಾಪಗಳಿಗಾಗಿ ಮರಣಹೊಂದಿದ ಕ್ರಿಸ್ತನೆಂದು ಅವನು ಅರ್ಥಮಾಡಿಕೊಂಡನೆಂದು ನಾವು ಹೇಳಬಹುದು. ಅವನು ಕ್ರಿಸ್ತನ ರಾಜ್ಯವನ್ನು ಪ್ರವೇಶಿಸಲಿಕ್ಕಾಗುವಂತೆ ಅವನು ಹೊಸದಾಗಿ ಹುಟ್ಟಲು ಬಯಸಿದನೆಂದು ಅವನು ತಿಳಿದನು (ಯೋಹಾನ 3:5). ಯೇಸುವನ್ನು ಹಿಂಬಾಲಿಸಲು ಒಪ್ಪಂದ ಮಾಡಿಕೊಳ್ಳಲು ಸಿದ್ಧನಾದನು, ಮತ್ತು ಬಾಪ್ತಿಸ್ಮ ಹೊಂದುವದರಿಂದ ಯೇಸುವಿನ ಮರಣದ ಮುಖಾಂತರ ತನ್ನ ಪಾಪಗಳು ಕ್ಷಮಿಸಲ್ಪಡಬೇಕೆಂದು ಅವನು ಅಪೇಕ್ಷಿಸಿದನು. ನಿಶ್ಚಯವಾಗಿಯೂ, ಕ್ರೈಸ್ತನಾಗಬೇಕೆಂದು ಬಯಸುವವನು ಅದನ್ನು ತಿಳಿಯತಕ್ಕದ್ದು.

## ಏನನ್ನು ನಾವು ನಂಬತಕ್ಕದ್ದು

ರಕ್ಷಿಸಲ್ಪಡುವದಕ್ಕಾಗಿ ನಾವು ಬಾಪ್ತಿಸ್ಮ ಹೊಂದತಕ್ಕದ್ದು (ಮಾರ್ಕ 16:16; 1 ಪೇತ್ರ 3:21). ರಕ್ಷಿಸಲ್ಪಡುವದಕ್ಕಾಗಿ ನಾವು ನಂಬತಕ್ಕ ಪ್ರತಿಯೊಂದನ್ನೂ ಬಾಪ್ತಿಸ್ಮ ಹೊಂದುವದಕ್ಕಾಗಿಯೂ ಸಹ ನಂಬತಕ್ಕದ್ದು. ನಾವು ನಂಬಬೇಕಾದ ಈ ಕೆಳಗಿನವುಗಳನ್ನು ಗಮನಿಸಿರಿ:

- ನಾವು ಪಾಪಿಗಳಾಗಿದ್ದೇವೆ (1 ತಿಮೊಥೆ 1:15).
- ದೇವರು ಅಸ್ತಿತ್ವದಲ್ಲಿರುತ್ತಾನೆ ಮತ್ತು ಆಸಕ್ತಿಯಿಂದ ಆತನನ್ನು ಹುಡುಕುವವರಿಗೆ ಆತನು ಬಹುಮಾನಿಸುತ್ತಾನೆ (ಇಬ್ರಿಯ 11:6).
- ಯೇಸುವು "I am" (ನಾನು ಆಗಿದ್ದೇನೆ) ಆಗಿದ್ದಾನೆ.[1]
- ಯೇಸುವು ಕ್ರಿಸ್ತನು (ಯೋಹಾನ 20:30, 31) ಮತ್ತು ಕರ್ತನು (ಅಪೊಸ್ತಲರ ಕೃತ್ಯಗಳು 2:36) ಆಗಿದ್ದಾನೆ. ಆತನು ಹೇಳುವದನ್ನು ನಾವು ಮಾಡುತ್ತೇವೆ ಎಂಬುದು ಇದರ ಅರ್ಥ (ಮತ್ತಾಯ 7:21; ಲೂಕ 6:46).
- ಯೇಸುವಿನ ಮಾತುಗಳು (ಯೋಹಾನ 5:47; 12:49, 50) ಮತ್ತು ಸುವಾರ್ತೆಯು (ಮಾರ್ಕ 16:15, 16; ರೋಮಾಪುರ 1:16; ಎಫೆಸ 1:13) ನಂಬಲ್ಪಡತಕ್ಕದ್ದು.
- ಯೇಸುವನ್ನು ಕುರಿತ ಸಾಕ್ಷಿಯನ್ನು (ಯೋಹಾನ 17:20; 2 ಥೆಸಲೊನೀಕ 1:10) ಮತ್ತು ರಾಜ್ಯವನ್ನು ಕುರಿತ ಬೋಧನೆಯನ್ನು (ಅಪೊಸ್ತಲರ ಕೃತ್ಯಗಳು 8:12) ನಂಬತಕ್ಕದ್ದು.
- ಯೇಸುವು ಎದ್ದಿದ್ದಾನೆ (ರೋಮಾಪುರ 10:9).
- ಯೇಸುವು ತನ್ನ ರಕ್ತದ ಮುಖಾಂತರ ನಮ್ಮ ಪಾಪಗಳ ವಿಮೋಚಕನಾಗಿದ್ದಾನೆ (ರೋಮಾಪುರ 3:24, 25).
- ದೇವರು ನಮ್ಮ ಜೀವಿತಗಳಲ್ಲಿ ಕಾರ್ಯ ಮಾಡುತ್ತಾನೆ (ಕೊಲೊಸ್ಸೆ 2:12).

ನಾವು *ಯಾವುದನ್ನು* ನಂಬಬೇಕು ಎಂಬುದನ್ನು ದೇವರು ಆಯ್ಕೆ ಮಾಡಿದ್ದಾನೆ - ಆದರೆ *ಯಾವುದನ್ನು* ನಂಬಬೇಕು ಮತ್ತು ಮಾಡಬೇಕು ಎಂಬುದನ್ನು ಆತನು *ಯಾಕೆ* ಆಯ್ಕೆ ಮಾಡಿಕೊಂಡಿದ್ದಾನೆ ಎಂಬುದನ್ನು ನಾವು ತಿಳಿದುಕೊಳ್ಳಬೇಕೆಂಬ ಅಗತ್ಯತೆ ಆತನಿಗಿಲ್ಲ. ಯೇಸುವಿನಲ್ಲಿ ಮತ್ತು ಆತನ ರಕ್ತದಲ್ಲಿ ನಂಬಿಕೆಯಿಡಲು ನಮಗಾಗಿ ಆತನು ಯಾಕೆ ಆಯ್ದುಕೊಂಡನು ಇಲ್ಲವೇ ಕ್ಷಮಿಸಲ್ಪಡುವದಕ್ಕಾಗಿ ಮಾನಸಾಂತರ, ಅರಿಕೆ, ಮತ್ತು ಬಾಪ್ತಿಸ್ಮ ಮಾಡಿಸಿಕೊಳ್ಳುವದನ್ನು ಆತನು ನಮಗಾಗಿ ಯಾಕೆ ಆಯ್ದುಕೊಂಡನು, ಎಂಬುದನ್ನು ನಾವೆಂದೂ ತಿಳಿಯದೇ ಇರಬಹುದು. ಈ ಆಯ್ಕೆಗಳನ್ನು ಆತನು *ಯಾಕೆ* ಮಾಡಿದನೆಂದು ನಾವು ಕೇಳಬಾರದು. ದೇವರು *ಮಾಡುವದರಲ್ಲಿ* ನಾವು ನಂಬಿಕೆಯಿಂದ ವರ್ತಿಸಬೇಕು.

# ಏನನ್ನು ನಾವು ನಿರ್ಧರಿಸತಕ್ಕದ್ದು

**ಒಂದು ನೂತನ ಸೃಷ್ಟಿಯಾಗಲಿಕ್ಕೆ**

ನಮ್ಮ ಸುತ್ತಲೂ ಇರುವ ದುಷ್ಟ ಜಗತ್ತಿನಿಂದ ಭಿನ್ನವಾಗಿರುವಂಥ ನೂತನ ಜನಾಂಗ ನಾವಾಗತಕ್ಕದ್ದು. ಯೇಸುವಿಗೆ ಸೇವೆಯಲ್ಲಿ ನಮ್ಮ ದೇಹಗಳನ್ನು ಸಜೀವ ಯಜ್ಞಗಳನ್ನಾಗಿ ಕೊಟ್ಟಿದ್ದೇವೆ "ಸುನ್ನತಿಯಾಗುವದರಲ್ಲಿ ಏನೂ ಇಲ್ಲ, ಸುನ್ನತಿಯಾಗದೆ ಇರುವದರಲ್ಲಿಯೂ ಏನೂ ಇಲ್ಲ; ಹೊಸ ಸೃಷ್ಟಿಯೇ ಬೇಕು" ಎಂದು ಪೌಲನು ಹೇಳಿದ್ದಾನೆ (ಗಲಾತ್ಯ 6:15). ಅವನು ಹೀಗೆಯೂ ಬರೆದನು,

> ಆದದರಿಂದ ಸಹೋದರರೇ, ದೇವರ ಕನಿಕರವನ್ನು ನಿಮ್ಮ ನೆನಪಿಗೆ ತಂದು ನಿಮ್ಮನ್ನು ಬೇಡಿಕೊಳ್ಳುವದೇನಂದರೆ - ನೀವು ನಿಮ್ಮ ನಿಮ್ಮ ದೇಹಗಳನ್ನು ದೇವರಿಗೆ ಮೀಸಲಾಗಿಯೂ ಮೆಚ್ಚಿಗೆಯಾಗಿಯೂ ಇರುವ ಸಜೀವ ಯಜ್ಞವಾಗಿ ಅರ್ಪಿಸಿರಿ; ಇದೇ ನಿಮ್ಮ ವಿವೇಕ ಪೂರ್ವಕವಾದ ಆರಾಧನೆಯು. ಇಹಲೋಕದ ನಡವಳಿಕೆಯನ್ನು ಅನುಸರಿಸದೆ ನೂತನ ಮನಸ್ಸನ್ನು ಹೊಂದಿಕೊಂಡು ಪರಲೋಕ ಭಾವದವರಾಗಿರಿ. ಹೀಗಾದರೆ ದೇವರ ಚಿತ್ತಕ್ಕನುಸಾರವಾದದ್ದು ಅಂದರೆ ಉತ್ತಮವಾದದ್ದೂ ಮೆಚ್ಚಿಕೆಯಾದದ್ದೂ ದೋಷವಿಲ್ಲದ್ದೂ ಯಾವ ಯಾವದೆಂದು ವಿವೇಚಿಸಿ ತಿಳುಕೊಳ್ಳುವಿರಿ (ರೋಮಾಪುರ 12:1, 2).
>
> ಹೀಗಿರಲಾಗಿ ಯಾವನಾದರೂ ಕ್ರಿಸ್ತನಲ್ಲಿದ್ದರೆ ಅವನು ನೂತನ ಸೃಷ್ಟಿಯಾದನು ಇಗೋ, ಪೂರ್ವ ಸ್ಥಿತಿ ಹೋಗಿ ಎಲ್ಲಾ ನೂತನವಾಯಿತು (2 ಕೊರಿಂಥ 5:17).

ಈ ನೂತನ ಸೃಷ್ಟಿ ಮತ್ತು ಸ್ವ-ತ್ಯಾಗವು, ಹೃದಯ ಪೂರ್ವಕವಾದ ವಿಧೇಯತೆಯ ಪರಿಣಾಮದಂತೆ ಬಾಪ್ತಿಸ್ಮದಲ್ಲಿ ಆಗುತ್ತದೆ (ರೋಮಾಪುರ 6:4-7, 17, 18). ಹೃದಯದ ಜೊತೆಗಾರಿಕೆಯಿಲ್ಲದೆ ನಮ್ಮ ಪರವಾಗಿ ಒಂದು ದೈಹಿಕ ಕೃತ್ಯವು ಸಾಕಾಗುವದಿಲ್ಲ. ನಾವು ನೀರಿನಲ್ಲಿ ಮುಳುಗೇಳಿಸಲ್ಪಟ್ಟಿದ್ದರಿಂದ ಮಾತ್ರ ನಾವು ಬದಲಾವಣೆ ಹೊಂದಿಲ್ಲ; ಮದ್ಯಪಾನ ಮಾಡುವವನು ದೇವಾಲಯದ ಮುಂದಿನ ಬಾಗಿಲಿನಿಂದ ಎಳೆಯಲ್ಪಟ್ಟು ಹಿಂದಿನ ಬಾಗಿಲಿನಿಂದ ಹೊರಗೆ ಒಯ್ಯಲ್ಪಡುವದರಿಂದ ಮದ್ಯಪಾನದಿಂದ ಗುಣಮುಕ್ತನಾಗುವದಿಲ್ಲ. ನಾವು ಬಾಪ್ತಿಸ್ಮ ಮಾಡಿಸಿಕೊಂಡಾಗ ನಮಗೆ ಹೃದಯದ ಬದಲಾವಣೆಯಾಗಿದ್ದರೆ ಮಾತ್ರ ನಾವು ನೂತನ ಸೃಷ್ಟಿಗಳಾಗುವೆವು.

ಬಾಪ್ತಿಸ್ಮದ ಸಬಂಧದಲ್ಲಿ (ರೋಮಾಪುರ 6:3-7), ಪೌಲನು ಈ ರೀತಿಯಲ್ಲಿ ವ್ಯಕ್ತಪಡಿಸಿದ್ದಾನೆ: "ಆದರೆ ನೀವು ಮುಂಚೆ ಪಾಪಕ್ಕೆ ದಾಸರಾಗಿದ್ದರೂ ನಿಮಗೆ ಕಲಿಸಲ್ಪಟ್ಟ ಬೋಧನೆಗೆ ನೀವು ಮನಃ ಪೂರ್ವಕವಾಗಿ ಅಧೀನರಾದದರಿಂದಲೂ, ಪಾಪದಿಂದ ಬಿಡುಗಡೆಯನ್ನು ಹೊಂದಿ, ನೀತಿಗೆ ದಾಸರಾದದರಿಂದಲೂ ದೇವರಿಗೆ ಸ್ತೋತ್ರವಾಗಲಿ" (ರೋಮಾಪುರ 6:17, 18).

ಪೂರ್ವ ಸ್ವಭಾವವನ್ನು ತೆಗೆದಿಟ್ಟು ನೂತನ ಸ್ವಭಾವವನ್ನು ನಾವು ಧರಿಸಿಕೊಳ್ಳಬೇಕೆಂದು ದೇವರು ಬಯಸುತ್ತಾನೆ. ಕೊಲೊಸ್ಸೆ 3:9, 10 ಹೀಗೆ ಹೇಳುತ್ತದೆ, "ಒಬ್ಬರಿಗೊಬ್ಬರು ಸುಳ್ಳಾಡಬೇಡಿರಿ; ನೀವು *ಪೂರ್ವಸ್ವಭಾವವನ್ನು* ಅದರ ಕೃತ್ಯಗಳ ಕೂಡ ತೆಗೆದಿಟ್ಟು ನೂತನಸ್ವಭಾವವನ್ನು ಧರಿಸಿಕೊಂಡಿದ್ದೀರಲ್ಲವೇ, ಈ ಸ್ವಭಾವವು ಅದನ್ನು ಸೃಷ್ಟಿಸಿದಾತನ ಹೋಲಿಕೆಯ ಮೇರೆಗೆ ದಿನೇದಿನೇ ನೂತನವಾಗುತ್ತಾ ಪೂರ್ವ

ಜ್ಞಾನವನ್ನು ಉಂಟು ಮಾಡುತ್ತದೆ." (ಒತ್ತಿ ಹೇಳಿದ್ದು ನನ್ನದು.)

ಯೇಸುವಿನ ಬಗ್ಗೆ ನಾವು ಕಲಿತುಕೊಳ್ಳುವಾಗ, ನಾವು ಕ್ರೈಸ್ತರಾಗುವಾಗ ಪಾಪಭರಿತ ರೂಢಿಗಳು ಹಿಂದಿನ ಸಂಗತಿಗಳೆಂದು ನಾವು ಅರ್ಥಮಾಡಿಕೊಳ್ಳಬೇಕು. ಎಫೆಸ 4:20-24 ಹೀಗೆ ಹೇಳುತ್ತದೆ,

> ನೀವಾದರೋ ಕ್ರಿಸ್ತನ ಧರ್ಮವನ್ನು ಅಂಥದೆಂದು ಕಲಿತುಕೊಳ್ಳಲಿಲ್ಲ. ಆತನನ್ನೇ ಕೇಳಿದಿರಲ್ಲಾ. ಆತನಲ್ಲಿಯೇ ಉಪದೇಶವನ್ನು ಹೊಂದಿದಿರಲ್ಲಾ. ಯೇಸುವಿನಲ್ಲಿರುವ ಸತ್ಯೋಪದೇಶವು ಯಾವದಂದರೆ - ನೀವು ನಿಮ್ಮ ಹಿಂದಿನ ನಡತೆಯನ್ನು ಅನುಸರಿಸದೆ ಪೂರ್ವಸ್ವಭಾವವನ್ನು ತೆಗೆದುಹಾಕಿಬಿಡಬೇಕು; ಅದು ಮೋಸಕರವಾದ ದುರಾಶೆಗಳಿಂದ ಕೆಟ್ಟು ಹೋಗುವಂಥದು. ನೀವು ನಿಮ್ಮ ಅಂತರ್ಯದಲ್ಲಿ ಹೊಸಬರಾಗಿ *ನೂತನಸ್ವಭಾವವನ್ನು* ಧರಿಸಿಕೊಳ್ಳಿರಿ. ಆ ಸ್ವಭಾವವು ದೇವರ ಹೋಲಿಕೆಯ ಮೇರೆಗೆ ಸತ್ಯಾನುಗುಣವಾದ ನೀತಿಯುಳ್ಳದ್ದಾಗಿಯೂ ದೇವಭಕ್ತಿಯುಳ್ಳದ್ದಾಗಿಯೂ ನಿರ್ಮಿಸಲ್ಪಟ್ಟಿದೆ. (ಒತ್ತಿ ಹೇಳಿದ್ದು ನನ್ನದು.)

ಶಿಶು ಬಾಪ್ತಿಸ್ಮದೊಂದಿಗಿನ ಸಮಸ್ಯೆಗಳಲ್ಲಿ ಒಂದು, ಬಾಪ್ತಿಸ್ಮದಲ್ಲಿ ಆಗಬೇಕಾದ ಬದಲಾವಣೆಯನ್ನು ಶಿಶುವು ಗ್ರಹಿಸಿಕೊಳ್ಳಲಾರದು ಹಾಗೂ ಮಾಡಲಾರದು. ಅದು ಹೃದಯದಿಂದ ವಿಧೇಯನಾಗಲಾರದು, ಯಾಕಂದರೆ ಅದು ಬಾಪ್ತಿಸ್ಮ ಹೊಂದುವಾಗ ಹೃದಯ ಬದಲಾವಣೆಯಾಗುವದನ್ನು ಅರ್ಥಮಾಡಿಕೊಳ್ಳಲಾರದು.

ಕ್ರಿಸ್ತನಲ್ಲಿರುವ ರಕ್ಷಣೆಯನ್ನು ನಾವು ಅಪೇಕ್ಷಿಸುವಾಗ, ಆತನ ಕ್ಷಮಾಪಣೆಯನ್ನು ಹುಡುಕುತ್ತ, ಹೃದಯದ ಯಥಾರ್ಥತೆಯಲ್ಲಿ ಆತನ ಬಳಿಗೆ ನಾವು ಬರಬೇಕು. ಬಾಪ್ತಿಸ್ಮದಲ್ಲಿ ನಾವು ಆತನೊಂದಿಗೆ ಹೂಣಲ್ಪಡುವಾಗ, ಆತನಿಗಾಗಿ ನೂತನ ಸೃಷ್ಟಿಗಳಾಗುವದನ್ನು ನಾವು ತೀರ್ಮಾನಿಸಿಕೊಳ್ಳತಕ್ಕದ್ದು. ಇದಕ್ಕಿಂತ ಯಾವುದೇ ಕಡಿಮೆ ಉದ್ದೇಶದಿಂದ ನಾವು ಬಾಪ್ತಿಸ್ಮಕ್ಕೆ ಬಂದರೆ, ನಾವು ಬಾಪ್ತಿಸ್ಮದ ಅರ್ಥವನ್ನು ಕಳೆದುಕೊಳ್ಳುತ್ತೇವೆ.

**ಒಬ್ಬ ಶಿಷ್ಯನಾಗುವದಕ್ಕೆ**

ಯೋಹಾನನಿಂದ ಬಾಪ್ತಿಸ್ಮ ಹೊಂದಿದವರು ಅವನ ಶಿಷ್ಯರಾದಂತೆ, ಯೇಸುವಿನ ಬಾಪ್ತಿಸ್ಮದೊಂದಿಗೆ ಬಾಪ್ತಿಸ್ಮ ಹೊಂದಿದವರು ಆತನ ಶಿಷ್ಯರಾದರು (ಯೋಹಾನ 4:1). "ಶಿಷ್ಯ" ಎಂಬ ಪದವು (ಗ್ರೀಕ.: *mathetes*) ಎಂಬುದು ಒಬ್ಬನ ಬೋಧನೆಯಲ್ಲಿ ಅವನನ್ನು ಅನುಸರಿಸುವಂತೆ ಯಾರೋ ಒಬ್ಬನಿಂದ ಕಲಿಯುವದರ ಬಗ್ಗೆ ಉಪಯೋಗಿಸಲ್ಪಟ್ಟಿದೆ. ಒಬ್ಬ ವ್ಯಕ್ತಿಯ ಹೆಸರಿನಲ್ಲಿಯ ಬಾಪ್ತಿಸ್ಮದ ಅನ್ವಯವು, ಬಾಪ್ತಿಸ್ಮ ಹೊಂದಿದವನು ಆ ವ್ಯಕ್ತಿಯ ಬೋಧನೆಯನ್ನು ಸ್ವೀಕರಿಸುವನು ಮತ್ತು ಅವನ ಹಿಂಬಾಲಕನಾಗುತ್ತಿರುವನು ಎಂದಾಗುತ್ತದೆ.

1 ಕೊರಿಂಥದಲ್ಲಿ ಪೌಲನು ಕೊರಿಂಥ ಸಭೆಯಲ್ಲಿಯ ವಿಭಜನೆಗಳ ಬಗ್ಗೆ ಮಾತಾಡುತ್ತಿದ್ದನು. ವಿವಿಧ ಸದಸ್ಯರು ತಾವು ಭಿನ್ನವಾದ ಪ್ರಸಿದ್ಧ ಕ್ರೈಸ್ತರ ಅನುಯಾಯಿಗಳಾಗಿದ್ದೇವೆಂದು ಹೇಳುತ್ತಿದ್ದರು (1 ಕೊರಿಂಥ 1:10-16). ಪೌಲ, ಅಪೊಲ್ಲೋಸ, ಮತ್ತು ಕೇಫನ (ಅಂದರೆ ಪೇತ್ರನ: ನೋಡಿರಿ ಯೋಹಾನ 1:42) ಹೆಸರುಗಳನ್ನು ಹೇಳಿಕೊಂಡರು. ಅವರು ಪೌಲನ ಹೆಸರಿನಲ್ಲಿ ಬಾಪ್ತಿಸ್ಮ ಹೊಂದಿಕೊಂಡಿರುವರೋ ಎಂದು ಪೌಲನು ಪ್ರಶ್ನಿಸಿದನು (1 ಕೊರಿಂಥ 1:13). ಅವರು ಪೌಲನ ಹೆಸರಿನಲ್ಲಿ

ಬಾಪ್ತಿಸ್ಮ ಮಾಡಿಸಿಕೊಂಡಿರದಿದ್ದರೆ, ಅವರು ಪೌಲನ ಅನುಯಾಯಿಗಳಾಗಿರುವರೆಂದು ಹೇಳಬಾರದೆಂಬುದು ಇದರ ಅರ್ಥವಾಗಿತ್ತು.

ನಾವು ಯೇಸುವಿನ ಹೆಸರಿನಲ್ಲಿ ಬಾಪ್ತಿಸ್ಮ ಮಾಡಿಸಿಕೊಳ್ಳುವಾಗ, ನಾವು ಆತನ ಅನುಯಾಯಿಗಳಾಗುತ್ತೇವೆ - ಆತನು ನಮ್ಮ ಕರ್ತನಾಗುವನು ಮತ್ತು ನಾವು ಆತನ ಸೇವಕರಾಗುವೆವು ಎಂಬುದನ್ನು ಅರ್ಥಮಾಡಿಕೊಳ್ಳಬೇಕು. ನಾವು ಇನ್ನು ಮುಂದೆ ಪಾಪಕ್ಕೆ ಸೇವೆ ಮಾಡಬೇಕಾಗಿರುವದಿಲ್ಲ; ಅದರ ಬದಲು, ನಾವು ಯೇಸುವನ್ನು ಸೇವಿಸ ಬೇಕು. ನಾವು ಆತನನ್ನು ಕರ್ತನಂತೆ ಸ್ವೀಕರಿಸಬೇಕು ಹಾಗೂ ಆತನನ್ನು ನಮ್ಮ ಶಿರಸ್ಸಿನಂತೆ ಆತನಿಗೆ ಅಧೀನರಾಗಬೇಕು (ಎಫೆಸ 5:24).

## ಸಾರಾಂಶ

ಬಾಪ್ತಿಸ್ಮವು ಆತ್ಮಿಕ ಸಂಬಂಧಗಳೂ ಅನ್ವಯಗಳೂ ಇರುವ ದೈಹಿಕ ಕಾರ್ಯ ವಾಗಿದೆ. ಇವುಗಳಿಲ್ಲದೇ ಬಾಪ್ತಿಸ್ಮವು ಬೆಲೆಯಿಲ್ಲದ್ದಾಗಿದೆ. ಬೈಬಲಿನ ದೃಷ್ಟಿಕೋನದಿಂದ ಬಾಪ್ತಿಸ್ಮವನ್ನು ಸ್ವೀಕರಿಸುವದಕ್ಕಾಗಿ ಪಾಪಗಳ ಕ್ಷಮಾಪಣೆಯ ಮುಖಾಂತರ ತಪ್ಪಾದ ಸಂಬಂಧವನ್ನು ಸರಿಪಡಿಸುತ್ತಿದ್ದೇವೆಂದು ಅರ್ಥಮಾಡಿಕೊಳ್ಳತಕ್ಕದ್ದು. ಪಾಪಭರಿತ ಜೀವಿತವನ್ನು ಬಿಟ್ಟು ನಮ್ಮ ಕೇವಲ ಕರ್ತನಂತೆ ಮತ್ತು ಯಜಮಾನನಂತೆ ಯೇಸುವಿಗೆ ಸಮರ್ಪಿಸಿದ ನೂತನ ಜೀವನ ಪ್ರವೇಶಿಸುವದಕ್ಕೆ ನಮ್ಮನ್ನು ಒಪ್ಪಿಸಿಕೊಡತಕ್ಕದ್ದು.

---

ಟಿಪ್ಪಣಿ

[1]"ನಾನು ಆತನಾಗಿದ್ದೇನೆ"ಎಂದು ಯೇಸು ಹೇಳಿದನು. ಗ್ರೀಕಿನಲ್ಲಿ "ಆತನು" ಇರುವದಿಲ್ಲ (ಯೋಹಾನ 8:24; ನೋಡಿರಿ 8:28, 58; 13:19), ಆದುದರಿಂದ ಇಂಗ್ಲೀಷ್ ಪಠ್ಯವು ಯೇಸು "I am" ಎಂದಿರುತ್ತದೆ.

---

## ಸುವಾರ್ತೆ ಮತ್ತು ಬಾಪ್ತಿಸ್ಮ

ನಾವು ಸುವಾರ್ತೆಯನ್ನು ಕೇಳಿ ಅದನ್ನು ನಂಬಿರದಿದ್ದರೆ, ನಮ್ಮ ಬಾಪ್ತಿಸ್ಮವು ಬೆಲೆಯಿಲ್ಲದ್ದಾಗುತ್ತದೆ. ಇದಕ್ಕಾಗಿಯೇ ಪೌಲನು, "ಬಾಪ್ತಿಸ್ಮ ಮಾಡಿಸುವದಕ್ಕಲ್ಲ, ಸುವಾರ್ತೆ ಯನ್ನು ಸಾರುವದಕ್ಕೆ ಕ್ರಿಸ್ತನು ನನ್ನನ್ನು ಕಳುಹಿಸಿದನು" (1 ಕೊರಿಂಥ 1:17ಎ) ಎಂದು ಬರೆದನು. ಬಾಪ್ತಿಸ್ಮವು ಮಹತ್ವವಿಲ್ಲದ್ದು ಎಂದು ಪೌಲನು ಹೇಳುತ್ತಿರುವದಿಲ್ಲ, ಆದರೆ ಸುವಾರ್ತೆಯ ಮಹತ್ವವನ್ನು ಒತ್ತಿ ಹೇಳುತ್ತಿರುವನು. ಈ ವಚನದಲ್ಲಿಯ ಗ್ರೀಕ್ ನುಡಿಗಟ್ಟು "not ... but" ಎಂಬುದು ಪೌಲನು ಬಾಪ್ತಿಸ್ಮ ಮಾಡಿಸಬಾರದಾಗಿತ್ತು ಎಂದು ಅರ್ಥ ಕೊಡುವದಿಲ್ಲ, ಯಾಕಂದರೆ ಅವನು ಬಾಪ್ತಿಸ್ಮ ಮಾಡಿಸಿದನು (1 ಕೊರಿಂಥ 1:14-16); ಆದರೆ ಸುವಾರ್ತೆಯು ಅವನ ಪ್ರಾಧಾನ್ಯತೆಯಾಗಿತ್ತು ಎಂದರ್ಥ ಕೊಟ್ಟಿತು.[1]

ಬಾಪ್ತಿಸ್ಮವು, ಸುವಾರ್ತೆಯ ಭಾಗವಾಗಿದ್ದರೂ, ಸಂಪೂರ್ಣ ಸುವಾರ್ತೆಯಿಲ್ಲದೇ ಅದು ರಕ್ಷಿಸಲಾರದು, ಎಂದು ಪೌಲನು ಬೋಧಿಸುತ್ತಿದ್ದನು; ಯಾಕಂದರೆ ರಕ್ಷಿಸುವ ಶಕ್ತಿಯು ಬಾಪ್ತಿಸ್ಮದಲ್ಲಿ ಇರಲಿಲ್ಲ, ಆದರೆ ಸುವಾರ್ತೆಯಲ್ಲಿತ್ತು (ರೋಮಾಪುರ 1:16; ಎಫೆಸ 1:13). ನಂಬಿಕೆ, ಮಾನಸಾಂತರ, ಅರಿಕೆ, ಮತ್ತು ಬಾಪ್ತಿಸ್ಮ ನಮ್ಮನ್ನು ರಕ್ಷಿಸುವಂಥವುಗ ಳಲ್ಲ. ಯೇಸುವಿನ ರಕ್ತವು ಮಾತ್ರವೇ ರಕ್ಷಿಸುತ್ತದೆ; ಹೀಗಿದ್ದರೂ ನಮ್ಮ ನಂಬಿಕೆಯು

ಮಾನಸಾಂತರಕ್ಕೆ, ಅರಿಕೆಗೆ ಮತ್ತು ಬಾಪ್ತಿಸ್ಮ ಮಾಡಿಸಿಕೊಳ್ಳುವದಕ್ಕೆ ನಡಿಸುವವರೆಗೆ ಆತನ ರಕ್ತವು ನಮ್ಮನ್ನು ರಕ್ಷಿಸುವದಿಲ್ಲ. ಪ್ರಸಂಗಿಸಲ್ಪಟ್ಟ ದೇವರ ವಾಕ್ಯವನ್ನು ಕೇಳುವದರಿಂದ ಸುವಾರ್ತೆಗೆ ಅಂಥ ವಿಧೇಯತೆಗೆ ನಾವು ನಡಿಸಲ್ಪಡಬೇಕು.

ರಕ್ಷಣೆಯ "ಯಾವುದು?" ಮತ್ತು "ಯಾವಾಗ?" ಎಂಬುದರ ಮಧ್ಯದಲ್ಲಿ ಒಂದು ಭಿನ್ನತೆ ಇರುತ್ತದೆ. ಯೇಸುವಿನ ಮರಣದಲ್ಲಿ ಸುರಿಸಲ್ಪಟ್ಟ ರಕ್ತವು, *(ಯಾವುದು)* ನಮ್ಮನ್ನು ರಕ್ಷಿಸುತ್ತದೆ. "ನನ್ನ ಪಾಪಗಳನ್ನು ಯಾವುದು ತೊಳೆಯುವುದು?"ಎಂದು ಕೇಳುವಲ್ಲಿ ಹಳೇ ಸಂಗೀತ ಸರಿಯಾಗಿದೆ ಮತ್ತು "ಯಾವುದೂ ಇಲ್ಲ, ಆದರೆ ಯೇಸುವಿನ ರಕ್ತ ಮಾತ್ರ" ಎಂದು ಅದು ಉತ್ತರಕೊಡುತ್ತದೆ. ನಾವು ಮಾಡುವ ಯಾವುದೂ ರಕ್ಷಣೆಯನ್ನು ಉತ್ಪಾದಿಸುವದಿಲ್ಲ (ಎಫೆಸ 2:8, 9); ಯೇಸುವಿನ ರಕ್ತವು ಮಾತ್ರವೇ ಅದನ್ನು ಮಾಡಬಲ್ಲದು (ಮತ್ತಾಯ 26:28; 1 ಪೇತ್ರ 1:18, 19).

ಯೇಸುವಿನ ರಕ್ತವು *ಯಾವಾಗ* ನಮ್ಮ ಪಾಪಗಳನ್ನು ತೊಳೆಯುವುದು? ನಾವು ಆತನಿಗೆ ವಿಧೇಯರಾಗುವಾಗ - ನಾವು ನಂಬುವಾಗ, ಮಾನಸಾಂತರ ಪಡುವಾಗ ಮತ್ತು ಬಾಪ್ತಿಸ್ಮ ಹೊಂದುವಾಗ. ಯೇಸುವು ನಮ್ಮ ಪಾಪದ ಸಾಲವನ್ನು ತೀರಿಸಿದನು, ಆದರೆ ಆತನು ತನ್ನ ಮರಣದ ಮುಖಾಂತರ ಆತನು ಒದಗಿಸಿದ ರಕ್ಷಣೆಯನ್ನು ಸ್ವೀಕರಿಸಲು ನಾವು ಆತನಿಗೆ ವಿಧೇಯರಾಗಬೇಕು (ಇಬ್ರಿಯ 5:9) ಆದುದರಿಂದ ರಕ್ಷಣೆಯಲ್ಲಿ "ಯಾವುದು?" ಎಂಬುದು ಯೇಸುವಿನ ರಕ್ತವಾಗಿದೆ, ಮತ್ತು "ಯಾವಾಗ?" ಎಂಬುದು ನಾವು ಆತನಿಗೆ ವಿಧೇಯರಾಗುವ ಸಮಯವಾಗಿದೆ.

ಯೋಗ್ಯವಾದ ದೃಷ್ಟಿಕೋನದಲ್ಲಿ ನಂಬಿಕೆ, ಮಾನಸಾಂತರ, ಅರಿಕೆ ಮತ್ತು ಬಾಪ್ತಿಸ್ಮಗಳು ಎಲ್ಲವೂ ಸುವಾರ್ತೆಗೆ ನಮ್ಮ ಪ್ರತ್ಯುತ್ತರದ ಭಾಗಗಳಾಗಿರುವವು. ಸುವಾರ್ತೆಯು ಯೇಸುವು ತನ್ನ ಮೇಲೆ ನಮ್ಮ ಪಾಪಗಳನ್ನು ಹೇಗೆ ತೆಗೆದುಕೊಂಡನು, ಪಾಪದ ಸಾಲವನ್ನು ತೀರಿಸಿದನು, ತನ್ನ ರಕ್ತದ ಮುಖಾಂತರ ನಮ್ಮ ಪಾಪಗಳನ್ನು ಕ್ಷಮಿಸಬಲ್ಲನು, ಮತ್ತು ಈಗ ವಿಶ್ವವನ್ನು ಆಳಿ ನಡಿಸುವವನಾಗಿ ವಿಜ್ಞಾಪನೆ ಮಾಡಲು ಸದಾಕಾಲ ಜೀವಿಸುವವನು ಎಂಬುದು ಸತ್ಯವಾಗಿದೆ. ನಮಗಾಗಿ ಆತನು ಹೊಂದಿಕೊಂಡ ಜಯವು ನಾವು ಸ್ವಾರ್ಥಕ್ಕೆ ಸತ್ತು, ಆತನು ನಮ್ಮ ಕರ್ತನೂ ನಮ್ಮನ್ನು ಆಳಿನಡಿಸುವವನೂ ಎಂದು ನಮ್ಮ ಜೀವಿತಗಳನ್ನು ಸಮರ್ಪಿಸುವಾಗ ಜಯವು ನಮ್ಮದಾಗುತ್ತದೆ.

---

ಟಿಪ್ಪಣಿ

[1]ಎರಡನೆಯದರ ಮೇಲಿನಂತೆ ಮೊದಲನೆಯದರ ಮೇಲೆ ಬಹಳ ಹೆಚ್ಚು ಒತ್ತು ಕೊಡದಿರುವ ಅರ್ಥದಲ್ಲಿ ಗ್ರೀಕಿನಲ್ಲಿ ಇಂಥದೇ ರಚನೆಯು ಯೋಹಾನ 6:27; 12:47; 1 ತಿಮೊಥೆ 5:23; 1 ಪೇತ್ರ 3:3, 4; ಮತ್ತು ಇತರ ಅನೇಕ ಕಡೆಗಳಲ್ಲಿ ಕಂಡುಬರುತ್ತದೆ.

© 2009 Truth for Today